ಇ) ಬೀದರ್ ಜಿಲ್ಲೆಯಲ್ಲಿ ಗುಲ್ಬರ್ಗಾ ಜಿಲ್ಲೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಹಾಲಿನ ಉತ್ಪಾದನೆಯಾಗುತ್ತಿರುವುದು ನಿಜವಲ್ಲವೇ?

ಈ) ಈಗ ಬೀದರ್ನಲ್ಲಿ ಉತ್ಪಾದನೆಯಾಗುತ್ತಿರುವ ಹಾಲನ್ನು ಗುಲ್ಬರ್ಗಾಕ್ಕೆ ಸಾಗಿಸುವ ಪರಿಸ್ಥಿತಿ ಇರುವುದರಿಂದ ಬೀದರ್ನಲ್ಲಿಯೇ ಡೈರಿಯನ್ನು ಸ್ಥಾಪಿಸುವುದರ ಮೂಲಕ ಹಾಲು ಒಕ್ಕೂಟವನ್ನು ಪ್ರಾರಂಭಿಸಲಾಗುವುದೇ?

ಉ) ಹಾಗಿದ್ದಲ್ಲಿ, ಆ ದಿಸೆಯಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಊ) ಇದಕ್ಕಾಗಿ ಕಳೆದ 3 ವರ್ಷಗಳಿಂದ ವಿಚ್ರ್ ಮಾಡಿರುವ ಹಣವೆಷ್ಟು?

ಋ) ಬೀದರ್ನಲ್ಲಿ ಡೈರಿಯ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಋೂ) ಆದಕ್ಕಾಗಿ ಎನ್.ಡಿ.ಡಿ.ಬಿ.(ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿ) ಯಿಂದ ನೆರವನ್ನೇನಾದರೂ ಕೇಳಲಾಗಿದೆಯೇ, ಅಥವಾ ಅಲ್ಲಿಂದ ನೆರವು ಬಂದಿದೆಯೇ?

ಎ) ಬಂದಿದ್ದಲ್ಲಿ, ಎಷ್ಟು ನೆರವು ಬಂದಿದೆ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ದಿನಂಪ್ರತಿ 225.09 (ಸಾವಿರ ಕೆ.ಜಿ.ಗಳಲ್ಲಿ)

ಆ) ದಿನಂಪ್ರತಿ 305.16 (ಸಾವಿರ ಕೆ.ಜಿ.ಗಳಲ್ಲಿ)

ಇ) ನಿಜವಲ್ಲ

ಈ) ಡೈರಿಯನ್ನು ಪ್ರಾರಂಭಿಸಲಾಗುವುದು. ಒಕ್ಕೂಟವನ್ನು ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲ.

ಉ) ಬೀದರ್ನಲ್ಲಿ 30 ಸಾವಿರ ಲೀಟರ್ (ಎಲ್ಎಲ್ಪಿಡಿ) ಸಾಮರ್ಥ್ಯದ ಡೈರಿಯ ಕಟ್ಟಡದ ಕಾಮಗಾರಿ ಕೆಲಸಗಳು ದಿನಾಂಕ : 18-10-93ರಲ್ಲಿ ಪ್ರಾರಂಭಮಾಡಿದ್ದು ಕೆಲಸ ಪ್ರಗತಿಯಲ್ಲಿದೆ.

(ಊ) ---

ಋ) ಡಿಸೆಂಬರ್ 1994ರೊಳಗೆ.

ಋೂ) ಇಲ್ಲ.

ಎ) ಉದ್ಭವಿಸುವುದಿಲ್ಲ.

ಆಯುರ್ವೇದ ಔಷಧಿ ವಿತರಕರ ತರಬೇತಿ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸುವುದು

348 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲೋಪತಿ ವೈದ್ಯಪದ್ಧತಿಯಲ್ಲಿ ಔಷಧಿ ವಿತರಕರ ತರಬೇತಿ ಅವಧಿ ಎರಡು ವರ್ಷಗಳಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಆಯುರ್ವೇದ ಔಷಧ ವಿತರಕರ ತರಬೇತಿ ಕೋರ್ಸಿನ ಅವಧಿಯನ್ನು 10 ತಿಂಗಳುಗಳಿಗೆ ನಿಗದಿಪಡಿಸಲು ಕಾರಣಗಳೇನು?

ಇ) ಕೇವಲ 10 ತಿಂಗಳು ಸರಿಯಾದ ರೀತಿಯಲ್ಲಿ ಈ ತರಬೇತಿಯನ್ನು ನೀಡುವುದು ಅಸಾಧ್ಯವಲ್ಲವೇ?

ಈ) ಆ ತರಬೇತಿ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸಬೇಕೆಂದು ಈಗಾಗಲೇ ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದು ನಿಜವಲ್ಲವೆ?

ಉ) 1948ನೇ ಇಸವಿಯ ಫಾರ್ಮಸಿ ಕಾಯ್ದೆ ಪ್ರಕಾರ ಔಷಧಿ ವಿತರಕರಿಗೆ ಎರಡು ವರ್ಷದ ತರಬೇತಿಯನ್ನು ನೀಡುವುದು ಅವಶ್ಯಕವಲ್ಲವೇ?

ಊ) ಹಾಗಿದ್ದಲ್ಲಿ ಮೇಲ್ಕಂಡ ತರಬೇತಿ ಕೋರ್ಸಿನ ಅವಧಿಯನ್ನು ಹೆಚ್ಚಿಸಿ ಈಗ ತರಬೇತಿಗಾಗಿ ಕರೆದಿರುವ ಅರ್ಜಿ ಆಹ್ವಾನವನ್ನು ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಆಯುರ್ವೇದ ಔಷಧಿ ವಿತರಕರ ತರಬೇತಿ ಕೋರ್ಸಿನ ಅವಧಿಯು ಈಗ 10 ತಿಂಗಳುಗಳಾಗಿದ್ದು, ಸರ್ಕಾರವು ನಿರ್ದಿಷ್ಟ ಪಡಿಸಿದ ಅವಧಿಯಂತೆ ತರಬೇತಿ ನೀಡಲಾಗುತ್ತಿದೆ.

ಇ) ಇಲ್ಲ.

ಈ) ನಿಜವಲ್ಲ.

ಉ) 1948ನೇ ಇಸವಿಯ ಫಾರ್ಮಸಿ ಕಾಯ್ದೆಯ ಅಲೋಪತಿ ವೈದ್ಯ ಪದ್ಧತಿಗೆ ಮಾತ್ರ ಅನ್ವಯಿಸುತ್ತದೆಯೇ ವಿನಃ ಆಯುರ್ವೇದ ಔಷಧಿ ವಿತರಕರ ತರಬೇತಿಗೆ ಅನ್ವಯಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಸಾಲರೂಪದ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ನೀಡುವ ಕುರಿತು

315 - ಶ್ರೀ ಪಿ. ಬಸವರಾಜು (ಬ್ರಹ್ಮವರ್) : ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಸ್.ಎಸ್.ಎಲ್.ಸಿ. ನಂತರದ ಶಿಕ್ಷಣಕ್ಕೆ ಈ ಹಿಂದೆ ನೀಡುತ್ತಿದ್ದ ರಾಷ್ಟ್ರೀಯ ಸಾಲ ರೂಪದ ವಿದ್ಯಾರ್ಥಿ ವೇತನವನ್ನು ಪ್ರಸ್ತುತ ಸ್ಥಗಿತಗೊಳಿಸಿರುವುದು ನಿಜವೇ? ನಿಜವಾದಲ್ಲಿ ಆದಕ್ಕೆ ಕಾರಣವೇನು? (ವಿವರ ನೀಡುವುದು)

ಆ) ವಿದ್ಯಾರ್ಥಿ ವೇತನಕ್ಕೆ ಈ ಹಿಂದೆ ರಾಜ್ಯ ಸರ್ಕಾರ ಎಷ್ಟು ಪಾಲು ಹಣವನ್ನು ಕೇಂದ್ರದೊಂದಿಗೆ ಭರಿಸುತ್ತಿತ್ತು? (ವಿವರ ನೀಡುವುದು)

ಇ) ವಿದ್ಯಾರ್ಥಿ ವೇತನವು ಸ್ಥಗಿತಗೊಂಡಿರುವುದರಿಂದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಈ) ಆದ್ದರಿಂದ ಪುನಃ ಇಂತಹ ವಿದ್ಯಾರ್ಥಿ ವೇತನಗಳನ್ನು ಅರ್ಹರಿಗೆ ನೀಡಲು ಪ್ರಾರಂಭಿಸಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು) :

ಅ)- ಹೌದು- ರಾಷ್ಟ್ರೀಯ ಸಾಲ ರೂಪದ ವಿದ್ಯಾರ್ಥಿ ವೇತನವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು 1991-92ನೇ ಸಾಲಿನಿಂದ ಈ ಯೋಜನೆಯನ್ನು ಸ್ಥಗಿತಗೊಳಿಸಿದೆ. ಈ ಈ ಬಗ್ಗೆ ಹೆಚ್ಚಿನ ಮಾಹಿತಿ ರಾಜ್ಯಕ್ಕೆ ಬಂದಿರುವುದಿಲ್ಲ.